ಕವಿತೆ



ಪ್ರಜ್ಞಾ ಮತ್ತೀಹಳ್ಳಿ
ಕಲೆ: ಜಬೀವುಲ್ಲಾ ಎಂ. ಅಸದ್



# ಮದುವೆ ಫೋಟೊ

ನಂಬಲಾಗುತ್ತಿಲ್ಲ ಅಲ್ಲವೆ
ನೀವೂ ಅಂತಲ್ಲ ಖುದ್ದು ನಾನೂ
ನಂಬದಂತಿದೆ ಮದುವೆ ಆಲ್ಬಂ
ಒಳಗಿನ ನನ್ನದೇ ಫೋಟೊ

ಹಿಂಡನಗಲಿದ ಹುಲ್ಲೆ ಅಂಡಲೆದು
ಕಾಡಿನುದ್ದ ಮತ್ತೆ ಅಮ್ಮನ ಸೇರಿ
ಮೈ ತಿಕ್ಕಿಸಿಕೊಳ್ಳುತ್ತ ಎಳೆಗರಿಕೆ
ಮೆಲ್ಲುವಂತಿದೆ ಆ ಮಂದಹಾಸ

ದಟ್ಟಡವಿ ನಡುವೆ ಬೆಟ್ಟದೆತ್ತರದಿಂದ
ಧುಮುಕುವಬ್ಬಿಯ ತುಂತುರು ಹೀರಿ
ಹೂಬಿರಿದ ಸುರುಗಿ ಗಿಡದಡಿ ನಿದ್ದೆ
ಮಾಡೆದ್ದ ಕಪಿಲೆ ಕರುವಂತಿದೆ ಆ ನೋಟ

ಎಳೆಬಾಳೆ ಸಸಿಯೊಂದು ಹಸಿರೆಲೆಯ
ಹೊರ ಚಾಚಿ ಸುಳಿ ಗಾಳಿ ಲಾಲಿಗೆ
ಕೊರಳಾಡಿಸಿ ಕುಣಿದು ಕಿರುಚೆವೆತ
ದಿಂಡಿನಂತಿದೆ ತೆಳು ಮೈಯ ಮಾಟ

ಹೀಗೆ ದಿಟ್ಟಿಸಬೇಡಿ
ಈಗಿನ ನನ್ನ
ತಳ ಸೀದ ಅನ್ನ
ಮಾಡಿದ ತಪ್ಪಲೆಯಂತೆ ಕಂಡೆನೆ
ಕಾವು ಹೆಚ್ಚಾದಾಗಲೇ
ಕಟ್ಟಿಗೆಯ ಹಿರಿಯಬೇಕಿತ್ತು
ಸೈರಣೆಯಿಲ್ಲದ ಸಂತರ್ಪಣೆಯಲ್ಲಿ
ಕೈ ಬಿಡುವೆಲ್ಲಿ ಹೇಳಿ



ನೀರು ಹೆಚ್ಚಿಡಬೇಕಿತ್ತು
ಎಂದಿರಾ
ಬಾವಿಗಿಳಿಸಿದ ಕೊಡ ಕಿರಿದಿತ್ತು
ಆಳ ತಳವಾರಿದ್ದು ತಿಳಿವಾಗ
ತಡವಾಗಿತ್ತು

ಸೌಟಾಡಿಸಬೇಕಿತ್ತು
ಆಗಾಗ ಬಂದು ಬಗ್ಗಿ
ಮುಚ್ಚಳ ತೆಗೆದು, ಹೌದು
ಕೂತುಣ್ಣುವವರ ಕರೆ
ಕರಕರೆ ಸಾರಿಗೆ ತುಪ್ಪ ಪಲ್ಯಕ್ಕೆಣ್ಣೆ
ಪಳದ್ಯಕ್ಕುಪ್ಪು ಓಡೋಡಿ ನೀಡಿ
ರುಚಿ ಟೀಕೆಗೆ ನೊಂದು ತೀಡಿ
ಇದ್ದಿದ್ದೇ ಬಿಡಿ
ಸಮಾರಾಧನೆಯ ಗಡಿಬಿಡಿ

ಆದರೂ ನೋಡಿ
ಹೀಗೆ ನಿಮ್ಮಂತವರು ಅಪರೂಪಕ್ಕೆ
ಬರುವವರು ಹಿಂದೆಂದೂ ಸಿಗದವರು
ಕಂಡಾಗ
ಕಾಣುತ್ತದೆ
ಕಣ್ಮರೆಯ ನೋಟದ ಸವಿಯೂಟ
ಸಿಹಿ ಸ್ಮೃತಿಯ ಹರಿವಾಣದಲ್ಲಿ
ಹಬೆಯಾಡುತ್ತದೆ
ನೂರು ಯೋಜನದಾಚೆಯಿಂದ
ಸೂಸಿ ಸುಳಿಯುವ ದಿವ್ಯಗಂಧ
ಮೆಲ್ಲನೆ ಕೈ ಹಿಡಿದು ನಡೆಸುತ್ತದೆ
ಮತ್ತೆ ಎಲ್ಲವೂ
ಶುರುವಾಗುವಂತಿದ್ದರೆ ಅ ಆ ದಿಂದ